# ಸಂಘಟಿತ ಗೋಡಂಬಿ ಉತ್ಪಾದನಾ ವಲಯ ಸರಕಾರದ ಪ್ಯಾಕೇಜ್‌ನ ನಿರೀಕ್ಷೆಯಲ್ಲಿ

ಭಾರತದ ಸಂಘಟಿತ ಗೋಡಂಬಿ ಉತ್ಪಾದನಾ ವಲಯ ಪ್ರಮುಖವಾಗಿ ಕೇರಳದಲ್ಲಿ ಸರಕಾರಿ ಪ್ಯಾಕೇಜ್‌ನ ಸಹಾಯದ ನಿರೀಕ್ಷೆಯಲ್ಲಿದೆ. ಕೇರಳದ ಗೋಡಂಬಿ ಉತ್ಪಾದನಾ ಸಂಘಟಿತವಲಯ ಹಲವಾರು ಸಮಸ್ಯೆಗಳನ್ನೆದುರಿಸುತ್ತಿದ್ದು, ಪುನಃಶ್ಚೇತನಕ್ಕಾಗಿ ಸರಕಾರದ ಸಹಾಯ ಪ್ಯಾಕೇಜ್‌ನ ಅವಶ್ಯಕತೆಯಿದೆ ಎಂದು ಕ್ಯಾಶ್ಯು ಎಕ್ಸ್‌ಪೋರ್ಟ್ ಪ್ರಮೋಶನ್ ಕೌನ್ಸಿಲ್ ಆಫ್ ಇಂಡಿಯದ (CEPCI) ಉಪ–ಅದ್ಯಕ್ಷರಾದ ಸುಂದರನ್ ಪ್ರಭಾ ಬಿಸ್‌ನೆಸ್‌ಲೈನ್‌ಗೆ ಹೇಳಿದ್ದಾರೆನ್ನಲಾಗಿದೆ. ಕೈಗಾರಿಕೆ ಸಾವಿರಾರು ಕಾರ್ಮಿಕರಿಗೆ, ಹೆಚ್ಚಿನ ಸಂಖ್ಯೆಯ ಮಹಿಳಾ ಕಾರ್ಮಿಕರಿಗೆ ವರ್ಷವಿಡೀ ಉದ್ಯೋಗ ನೀಡುವಲ್ಲಿ ಸಮಸ್ಯೆಯನ್ನೆದುರಿಸುತ್ತಿದೆಯೆಂದೂ, ಸಂಘಟಿತ ವಲಯದಲ್ಲಿನ ಅರ್ಧಾಂಶಕ್ಕಿಂತಲೂ ಹೆಚ್ಚು ಕಾರ್ಖಾನೆಗಳ ಎಪ್ರಿಲ್ ಆರಂಭದಿಂದ ವ್ಯವಹಾರ ನಡೆಸುತ್ತಿಲ್ಲವೆಂದೂ ಅವರು ಹೇಳಿದರು. ಕೇರಳ ಸರಕಾರ ಕಾರ್ಮಿಕರ ವೇತನವನ್ನು ಗಣನೀಯವಾಗಿ ಹೆಚ್ಚಳ ಮಾಡಿದ್ದು, ಕೇಂದ್ರ ಸರಕಾರದ ರಫ್ತು ಪ್ರೋತ್ಸಾಹಧನ ಕಡಿತ ಮತ್ತು ಕಚ್ಚಾಗೋಡಂಬಿ ದರ ಹೆಚ್ಚಳದಲ್ಲಿರುವುದರಿಂದ ಅರ್ಥಿಕ ಸಮಸ್ಯೆಗಳನ್ನೆದುರಿಸುತ್ತಿದೆಯೆನ್ನಲಾಗಿದೆ. ಇದರಿಂದ ಈ ವರ್ಷದ ಗೋಡಂಬಿ ರಫ್ತು ಗಣನೀಯ ಇಳಿಕೆಯಾಗಿದೆಯೆನ್ನಲಾಗಿದೆ.

ಎಪ್ರಿಲ್‌ನಿಂದ ಆಗಸ್ಟ್ 2015ರ ವರೆಗಿನ ರಫ್ತು 41658 ಟನ್ ಮತ್ತು ಕೆ.ಜಿ ಗೆ ರೂ 496.54 ದರದಲ್ಲಿ ರೂ. 2068 ಕೋಟಿಗೆ ಇಳಿಕೆಯಾಗಿದೆ. ಹಿಂದಿನ ವರ್ಷ ಈ ಅವಧಿಯಲ್ಲಿ ಕೆ.ಜಿ.ಗೆ ರೂ 439.24ರ ದರದಲ್ಲಿ ರೂ 2088.54 ಕೋಟಿ ಮೌಲ್ಯದ 47549 ಟನ್ ಗೋಡಂಬಿ ತಿರುಳು ರಫ್ತಾಗಿತ್ತು. ಕೇಂದ್ರ ಸರಕಾರ ರಫ್ತು ಪ್ರೋತ್ಸಾಹ ಧನ ಕಡಿತಮಾಡಿದ್ದು, ಕಚ್ಚಾ ಗೋಡಂಬಿ ಆಮದಿಗೆ ಎಕ್ಸೈಜ್ ಡ್ಯೂಟಿಯಿಂದ ವಿನಾಯಿತಿ ನೀಡಿದೆ. ಕೆಲವು ಹೊಸ ಕಚ್ಚಾ ಗೋಡಂಬಿ ವ್ಯವಹಾರ ಸ್ಥಿರ ಹೆಚ್ಚಿದ ಈಗಿನ ದರದಲ್ಲಿ ಗೋಡಂಬಿ ಆಮದು ಮಾಡುತ್ತಿದ್ದು ಅಸಂಘಟಿನ ವಲಯದ ಕಾರ್ಖಾನೆಗಳಿಗೆ ಮಾರಾಟ ಮಾಡುತ್ತಾರೆಂದು ಅವರು ಹೇಳಿದ್ದಾರೆ. ಭಾರತದ ಗೋಡಂಬಿ ರಫ್ತುವಲಯದ ಪ್ರಮುಖ ಪ್ರತಿಸ್ಪರ್ಧಿಯಾದ ವಿಯೆಟ್ನಾಂ ಆಧುನಿಕ ಯಾಂತ್ರೀಕರಣದಿಂದ ತನ್ನ ಉತ್ಪಾದನಾ ಸಾಮಾರ್ಥ್ಯವನ್ನು ಹೆಚ್ಚಿಸಿದ್ದು ಸಾಗರದಾಚೆಗಿನ ರಾಷ್ಟ್ರಗಳಿಂದ ಅತಿ ಹೆಚ್ಚು ಪ್ರಮಾಣದಲ್ಲಿ ಕಚ್ಚಾಗೋಡಂಬಿ ಆಮದು ಮಾಡುತ್ತಿದೆ.